ನಂಬೀದುರ್ಗದ ಡಿವಿಜ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟ್‌ನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಬೆಂಗಳೂರು ಕೊರಜರಪಾಳ್ಯದಲ್ಲಿರುವ ಗರ್‌ಮೇಕರ್ ಮಹಮ್ಮದ್‌ಖಾಸಿಂನ ವಿಷಯದಲ್ಲಿ—
ಸ್ ೧೮೯೫—೯೬ನೇ ಇಸವಿ ದಿವಾಳಿ ಕೇಸ್ ನಂಬರ್ 349.

ಹುಕ್ಕುಂ,

ಮೇಲ್ಕಂಡ ಮಹಮ್ಮದ್‌ಖಾಸಿಂನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಈ ಕೋರ್ಟು ರೂಬರೂ ಅರ್ಜಿದಾರನನ್ನು ಮತ್ತು ಸದರಿಯವರ ಲೇಣೇದಾರರಾದ 1ನೇ ಬೆಂಗಳೂರು ದೊಡ್ಡಪೇಟೆ ಜವಳಿ ಅಂಗಡಿ ಪಾವಡಿ ಮುದ್ದುರಾಮಯ್ಯನ ಯದುರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತ್‌ಗೆ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ—2ನೇ ಗರ್‌ಮೇಕರ್ ಕೃಷ್ಣಸಿಂಗ್, 3ನೇ ಅಬ್ದುಲ್ ಹಕೀಂಸಾಬಿ, 4 (i) ಮುನಿಗುರಪ್ಪ (ii) ಮುನಿಗುರುಶಟ್ಟಿ, 5ನೇ ಮೊಹರ್ದಿರ್ಖಾನ್‌ಸಾಬ್ 6ನೇ ತವಕಲ್‌ಸಾಬಿ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಮಹಮ್ಮದ್‌ಖಾಸಿಂನು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿವೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ಥರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ ದಾರಿಯಿಂದ ಸಹ ಅವರನ್ನು ನಿಖಾಲಸಿ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ ೧೮೯೬ನೇ ಇಸವಿ ಅಕ್ಟೋಬರ್ 24ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ದಾವಾಗೆ ದಕ್ಕಿ ಉಳಿದದ್ದು.	ದೇಣೆಯ ಸ್ವಭಾವ ಮತ್ತು ಆದರ ಪ್ರತಿಫಲ ಮತ್ತು ಗರ್ಜಿ ಯೀಸಾದರೂ ಇದ್ದರೆ.	ಷರಾ.
1	ಬೆಂಗಳೂರು ದೊಡ್ಡಪೇಟೆ ಜವಳಿಅಂಗಡಿ ಪಾವಡಿ ಮುದ್ದುರಾಮಯ್ಯ	50—2—11	..	ಬೆಂಗಳೂರು ಸಬ್ ಜಡ್ಜಿಯವರ ಕೋರ್ಟ್ 1894—95ನೇ ಇಸವಿ ಸ್ಮಾಲ್॥ 2384ನೇ ನಂ. ಡಿಕ್ರಿ ಪ್ರಕಾರ.	
2	ಬೆಂಗಳೂರು ಮಾರ್ಕೆಟ್ ಗರ್‌ಮೇಕರ್ ಕೃಷ್ಣಸಿಂಗ್	800— 0—0 ಅಸಲ್	..	ಬಡ್ಡಿ ಪತ್ರದ ಒಗೆ ಲೆಖ್ಖಾಚಾರದ ಮೇರಿಗೆ ಬಡ್ಡಿ ಕೊಡಬೇಕು.	
	ಡಿಟೋ ಯವರಿಗೆ ...	26—0—0	..	ಡಿಕ್ರಿ ಪ್ರಕಾರ.	
3	ಬೆಂಗಳೂರು ಕಂಟೋನ್ಮೆಂಟ್ ಬೊಂಬು ಬಜಾರಿನಲ್ಲಿ ಗರ್‌ಮೇಕರ್ ಕೆಲಸ ಮಾಡುವ ಅಬ್ದುಲ್ ಹಕೀಂ ಸಾಬಿ	32—12—0	..	ಬೆಂಗಳೂರು ಕಂಟೋನ್ಮೆಂಟ್ ಸಿವಿಲ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟ್ 1895—96ನೇ ಇಸವಿ ಸಿವಿಲ್ 13ನೇ ನಂ. ಡಿಕ್ರಿ ಪ್ರಕಾರ.	
4	ಬೆಂಗಳೂರು ರಾಮಂಣನ ಪೇಟೇಲಿರುವ ದೇವಾಂಗದ ಮುನಿಗುರಪ್ಪ, ಮುನಿಗುರುಶಟ್ಟಿ	200—0—0 ಅಸಲ್	...	ಆಧಾರ ದಸ್ತ್ರಿವಜು ಬಗೆ ಲೆಖ್ಖಾಚಾರದಂತೆ ಬಡ್ಡಿ ಕೊಡಬೇಕು.	
5	ಬೆಂಗಳೂರು ಮಹಲ್‌ದಾರ್ ಪೇಟೇಲಿರುವ ಮೊಹರ್ದಿರ್ಖಾನ್‌ಸಾಬಿ	100—0—0	..	ಬೆಂಗಳೂರು ಕಲಾಸಿಪಾಳ್ಯದಲ್ಲಿರುವ ಹರ್ಜಬೇಗ್ ವುರಫ್ ಮಿರ್ಜಾಸಾಬರಿಗೆ ಬೆಂಗಳೂರು ಮುನಸಿಫ್ ಕೋರ್ಟ್ 1893—94ನೇ ಇಸವಿ ಅಸಲ್ 179ನೇ ನಂ. ಡಿಕ್ರಿ ಮೇರಿಗೆ ಪಾವತಿಗೆ ತೆಗೆದುಕೊಂಡದ್ದು.	
6	ಬೆಂಗಳೂರು ಕುಂಬಾರ ಪೇಟೇಲಿರುವ ತವಕಲ್ ಸಾಬಿ ...	228—14—8	..	ಬೆಂಗಳೂರ ಮುನಸಿಫ್ ಕೋರ್ಟ್ 1893—94ನೇ ಇಸವಿ ಬರಜನಲ್ 769ನೇ ನಂ ಡಿಕ್ರಿ ಪ್ರಕಾರ.	

ದಿವಾಳಿಯಾದ ಡಿಕ್ರಿ ದೇಣೇದಾರ ಕೋಲಾರದಲ್ಲಿರುವ ಗಿರವಾಜಿರಾಮರಾಯನ ವಿಷಯದಲ್ಲಿ—
ಸ್ ೧೮೯೫—೯೬ನೇ ಇಸವಿ ದಿವಾಳಿ ವ್ಯಾಜ್ಯದ ನಂಬರು 376.

ಹುಕುಂ.

ಮೇಲ್ಕಂಡ ಗಿರವಾಜಿರಾಮರಾಯನು ಖುಲಾಸೆಯಾಗಬೇಕೆಂದು ಕೋರಿ ಬರದುಕೊಂಡ ಅರ್ಜಿಯು ಈ ಕೋರ್ಟು ರೂಬರೂ ಅರ್ಜೀದಾರನ ಸಮಕ್ಷಮದಲ್ಲಿ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದ್ಮಾಡಲ್ಪಡುವ ಲೇಣೇದಾರ್ರಿಗೆ ಈ ದರ್ಯಾಫ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ತಾವೆ ಖುದ್ದಾಗಿಯಾಗಲಿ ಲಾಯರ್ ಮೂಲಕವಾಗಿ ಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ—1ನೇ ಕೋಲಾರದಲ್ಲಿರುವ ಫ್ಲೀಡರ್ ಬಲಳಾಚಾರ್ಯರು, 2ನೇ ಡಿಟೋ ಸ್ಥಳದಲ್ಲಿರುವ ಫ್ಲೀಡರ್ ಗುರುರಾಯರು, 3ನೇ ಬವರಿಂಗ್‌ಪೇಟೆ ತಾಲ್ಲೂಕು ಐವಾಡಿ ಹೊಸಹಳ್ಳಿಯಿರುವ ನರಸಿಂಹಾಚಾರ್ರು ಭವತಿ ಇವರ ಮುಕ್ತೆಳು ತಾತಾಚಾರ್ರು, ರಾಮಾಚಾರ್ರು, ರಾಮಾನುಜಲು ಮೈನರ್‌ಗಳು ಇವರ ಗಾರ್ಡಿಯರ್ ತಾಯಿ ಮಂಗಮ್ಮ.

ಸದರೀ ಗಿರವಾಜಿಯಾವುರಾಯನು ದಿವಾಳಿಯಾದವನೆಂದುನ್ನು ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನು ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದು ಇದರಿಂದ ತೀರ್ಮಾನಿಸಲ್ಪಟ್ಟಿರುತ್ತದೆ. ಕೋರ್ಟು ಮಜಕೂರ್ ಶಿರಸ್ತೇದಾರು, ಮತ್ತು ನಾಜರನ್ನು ದಿವಾಳಿಯಾದವನ ಜಿಂದಗಿಗೆ ರಿಸೀವರಾಗಿ ಮೊಕರರ್ ಮಾಡಲ್ಪಡತಕ್ಕದ್ದೆಂದೂನ್ನು ಸದರೀ ರಿಸೀವರಾದವನು ಒಜನೆ ತನ್ನ ರಿಸೀವರ ಕೆಲಸಗಳಿಗೆ ಉದ್ಯುಕ್ತ ಪಡತಕ್ಕದ್ದೆಂದುನ್ನು ಮತ್ತು ಸದರೀ ರಿಸೀವರನು ತಾನು ನಡೆಸಿದ ಕೆಲಸಗಳ ಪ್ರತಿ ಫಲಕ್ಕಾಗಿ ದಿವಾಳಿ ಯಾದವನ ಲೇಣೇದಾರರಿಗೆ ಬಟವಾಡೆ ಮಾಡಿದ ಮೊಬಲಗಿನ ಬಾಕಿ ಹಣದಲ್ಲಿ ದರ ಶೇಕಡಾ ೫ ರೂಪಾಯಿ ಮೇರೆ ಕಮ್ಮಿಷನ್ ನಿಲ್ಲಿಸಿಕೊಳ್ಳತಕ್ಕದ್ದೆಂದುನ್ನು ಸಹ ಹುಕ್ಕುಂ ಮಾಡಲ್ಪಟ್ಟು, ಇದೆ.

ಸ್ ೧೮೯೬ನೇ ಇಸವಿ ಆಗಸ್ಟ್ 21ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ದಿವಾಳಿಯಾದ ಡಿಕ್ರಿ ಲೇಣೇದಾರ, ಗೋರಿಬಿದನೂರು ತಾಲ್ಲೂಕು ಮಂಜೇನಹಳ್ಳಿಲಿರುವ ಲಚ್ಚಗನ ವಿಷಯದಲ್ಲಿ—

ಸ್ ೧೮೯೫—೯೬ನೇ ಇಸವಿ ದಿವಾಳಿ ಕೇಸ್ ನಂಬರ್ 381.

ಹುಕುಂ.

ಮೇಲ್ಕಂಡ ಲಚ್ಚಗನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕಪಟ್ಟು ಈ ಕೋರ್ಟು ರೂಬರೂ ಅರ್ಜಿದಾರನಾದ ಲಚ್ಚಗನ ಪರವಾಗಿ ಅಡ್ವೊಕೇಟ್ ಮಿಸ್ಟರ್ ಕೃಷ್ಣಸ್ವಾಮಿರಾಯರ ಯದುರಿಗೆ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ—ಗೋರಿಬಿದನೂರು ತಾಲ್ಲೂಕು ಮಂಜೇನಹಳ್ಳಿಲಿರುವ ಮಳ್ಳಿಗೆ ಮಲ್ಲಯ್ಯ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಲಚ್ಚಗನು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನು ನಿರ್ಖಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ ೧೮೯೬ನೇ ಇಸವಿ ಜುಲೈ 1ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ರುಜುವಾತಾವ ಸಾಲದಪಟ್ಟಿ.

ನಂಬರು.	ಲೇಣೇದಾರು, ಅಥವಾ ದಾವಾದಾರ, ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯುವಂದ ಅವರುಗಳ ವಾಸಸ್ಥಳ.	ಸೊಮಲಗನ.	ಯಾವಾಗ ನಡೆಸೇ ಇಲ್ಲವು ದಪ್ಪನ್ನ.	ದೇಣಿಯ ಸ್ವಭಾವ ಮತ್ತು ಅದರ ಪ್ರತಿ ಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಟೀಕು.
1	ಗೋರಿಬಿದನೂರು ತಾಲ್ಲೂಕು ಮಂಜೇನ ಹಳ್ಳಿಲಿರುವ ಮಳ್ಳಿಗೆ ಮಲ್ಲಯ್ಯ ..	135-15-0	..	ಬೆಂಗಳೂರು ಮ್ಯುನಿಸಿಪಲ್ ಕೋರ್ಟು 1895—96ನೇ ಇಸವಿ ಜಾರಿ 761ನೇ ನಂಬರ್ ವಾರಂಟ್ ಮೊಬಲಗು.	

ಸಿ. ಕ್ರಾಸ್,
ಡಿಸ್ಟ್ರಿಕ್ಟ್ ಜಡ್ಜ್.

ಬೆಂಗಳೂರು ಡಿಸ್ಟ್ರಿಕ್ಟ್.

ಇನ್ಸಾಲ್ವೆನ್ಸಿ.

ತಾರೀಖು 23ನೇ ನವೆಂಬರ್ 1896.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ. ಬೆಂಗಳೂರು ಸಿಟಿ. ಕಬ್ಬನ್ ಸಾಹೇಬರ ಪೈಟೆಗೆ ಕೇರಿದ ಗುಂಪು ಟದಲ್ಲಿದ್ದು ಜೇವಾರ್ಸ್ ತರೀಕ್ ಮೃತಪಟ್ಟ ಸುಲ್ತಾನಮ್ಮನೆಂಬವಳ ಬಾಬತು ಐರ್ಜ ಗುಮ್ಮಟದ ೨ನೇ ನಂಬರ್ ಗಲ್ಲಿಯಲ್ಲಿರುವ ಮ್ಯುನಿಸಿಪಲ್ ನಂಬರ್ 3, 4, 5, 6, 7, 8 ಮತ್ತು ಲಂಗಡಾ ಹುರ್ಕಸಾಬಿ ಗಲ್ಲಿಯಲ್ಲಿ ಇರುವ ನಂಬರ್ 4 ಈ ನಂಬರ್‌ಗಳುಳ್ಳ ಮನೆಗಳನ್ನು ಐರ್ಜ ಮನೆಗಳ ಬಯಲೆ ಬೆಂಗಳೂರು ತಾಲ್ಲೂಕು ಅಮಲ್ದಾರ್ ರೂಬರೂ ಸ್ ಮಜಕೂರು ಡಿಸೆಂಬರ್ ಮಾಹೆ 14ನೇ ತಾರೀಖು ದಿವಿ 11 ಘಂಟೆಗೆ ಹರಾಜ್ ಮಾಡಲ್ಪಡುತ್ತೆಯಾಗಿ ಆ ಕಾಲಕ್ಕೆ ಸರಿಯಾಗಿ ಖರೀದಿಸ್ಯಾಡತಕ್ಕವರು ಹಾಜರಾಗಿ ಛಡಸವಾಲ್ಯಾ ಡಿ ತೆಗದುಕೊಳ್ಳಬಹುದು. ಆ ರೀತಿ ತೆಗದುಕೊಂಡವರು ಹರಾಜ್ ಖೈದಾದ ಕೂಡ್ಲೆ ಶೇಕಡಾ 25 ರೂಪಾಯಿಗಳ ಮೇರಿಗೆ ಡಿಪಾಜಿಟ್ ಹಾಜರ್ಮಾಡಬೇಕು. ತಪ್ಪಿದಾಯ 15 ದಿವಸಗಳೊಳಗಾಗಿ ಪೂರಾ ಮೊಬಲಗು ಹಾಜರ್ಮಾಡಬೇಕು. ಡಿಸ್ಟ್ರಿಕ್ಟ್, ಮಾಜಿಸ್ಟ್ರೇಟರವರಿಂದ ಹರಾಜ್ ಮಂಜೂರಾಗಿ ಬಂದ ಬಳಿಕ ಮನೆಗಳು ಹರಾಜಿನಲ್ಲಿ ಪಡದವರ ಸುಪರ್ದು ಮಾಡಲಾಗುತ್ತೆ.

ಮೇಲೆ ನಮೂದಿಸಿರುವ ಡಿಪಾಜಿಟ್ ಮತ್ತು ಪೂರಾ ಮೊಬಲಗು ಹಾಜರ್ಮಾಡದೆ ತಪ್ಪಿದಲ್ಲಿ ಪುರಸಾ ಹರಾಜ್ ಮಾಡಲ್ಪಡುತ್ತೆ. ಲುಕ್ಸಾನ್ ಆದಲ್ಲಿ ಕಮ್ಮಿ ಬೀಳುವ ಮೊಬಲಗ್ಗೆ ಮೊದಲನೇ ಛಡಸವಾಲ್‌ದಾರನನ್ನು ಗುರಿಪಡಿಸಲ್ಪಡುತ್ತೆ.

ಎಂ. ಅಂತಾಜೀರಾವ್,
ಪೂರ್ ಡೆಪ್ಯೂಟಿ ಕಮ್ಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್.